# ವಿ. ಸೀತಾರಾಮಯ್ಯ

ವಿ.ಸೀ. ಎಂದರೆ ಸಾಕು. ಮೈಸೂರು ರುಮಾಲು, 'ಪಂಪಾ ಯಾತ್ರೆ' ಥಟ್ಟನೆ ನಮಗೆ ನೆನಪಿಗೆ ಬಂದು ಬಿಡುತ್ತದೆ.

ಅವರ 'ಕಾಲೇಜ್ ದಿನಗಳು' ಮುದ್ರಣ ನಮ್ಮಲ್ಲಿ ಪ್ರಾರಂಭವಾಯಿತು. ಐ.ಬಿ.ಹೆಚ್. ಪ್ರಕಟಣೆ.

ಕಾಲೇಜ್ ಸಾಕು. ಇಂಗ್ಲಿಷಿನಲ್ಲಿ **College** ಅಲ್ಲವೇ? ಹಾಗಿರುವಾಗ ದೀರ್ಘ ಕಾಲೇಜ್ ಯಾಕೆ ಬೇಡ. ಇದು ಅವರ ಅಭಿಪ್ರಾಯ.

ಅಯ್ಯರ್ ಹಾಗೆ, ಪರಮೇಶ್ವರ ಭಟ್ಟರ ಹಾಗೆ, ಮಾಸ್ತಿಯವರ ಹಾಗೆ 'ಎಲ್ಲ ನಾನೇ ನೋಡಿ ಮಾಡಿ ಬಿಡುತ್ತೇನೆ' ಎಂದರೆ ವಿ.ಸೀ. ಒಪ್ಪುವವರು ಅಲ್ಲ, 'ಬೇಡಪ್ಪಾ ನಾನೂ ಒಂದು ಸಲ ನೋಡಲೇಬೇಕು. ನೋಡಿದರೆ ಒಳ್ಳೇದು' ಎನ್ನುತ್ತಿದ್ದರು. ನೋಡಿದರೆ ನೋಡಿಕೊಳ್ಳಲಿ ಎಂದರೆ, ನಮ್ಮ ಪ್ರೆಸ್ಸಿನ ಕಂಪಾಸಿಟರುಗಳಿಗೆಲ್ಲ ವಿ.ಸೀ. ಮೇಲೆ ಭಯಂಕರ ಸಿಟ್ಟು!

ಯಾಕೆಂದರೆ ಅವರು ಒಂದು ಆರೋಹಣ ಮಾರ್ಕ್ ಹಾಕಿ ಮೆಲ್ಲಗೆ ಏನಾದರೂ ಸೇರಿಸಿಬಿಟ್ಟರೆ ಅದು, ಆ ಸಾಲು, ಉದ್ದಕ್ಕೆ ಉಗಿಬಂಡಿಯಂತೆ ಜಿಗಿ ಜಿಗೀ ಮುಂದಕ್ಕೆ ಹೊರಟು ಹೋಗುತ್ತ ಇತ್ತು.

'ಗ್ಯಾಲಿ ಪ್ರೂಫಿನಲ್ಲಿ ನೀವು ಏನಾದರೂ ಮಾಡಿಕೊಳ್ಳಿ ಸಾರ್, ಪೇಜು ಕಟ್ಟಿದ ಪ್ರೂಫಿನಲ್ಲಿ ಹೀಗೆ ಮಾಡಿದರೆ ಎರಡು–ಮೂರು ಸಾಲುಗಳೇ ಮುಂದಕ್ಕೆ ಎಗರಿ ಹೋಗುತ್ತವೆ. ನಮಗೆ ಫಜೀತಿಯಾಗುತ್ತದೆ' ಎಂದರೆ...

'ಹೌದಪ್ಪಾ, ನಿಮ್ಮ ಮಾತು ನಿಜ, ಅದು ನಮಗೂ ಗೊತ್ತು. ಆದರೆ ನಾನು ಏನು ಮಾಡಲಿ? ನನಗೆ ಇದೊಂದು ಕೆಟ್ಟ ಚಟ' ಎಂದುಬಿಡುತ್ತ ಇದ್ದರು.

ಒಂದು ಸಲ ಮೆಲ್ಲನೆ ಹೀಗೇ ಏನೋ ಸೇರಿಸಿಬಿಟ್ಟರು. ಪೇಜು ಕಟ್ಟಿದ ಪ್ರೂಫಿನಲ್ಲಿ, ಅದು ಮಿಷನ್ನಿಗೆ ಹೋಗಬೇಕು ಎನ್ನುವಾಗ, ವೀ.ಸೀ.ಯವರ ಜಾಯಮಾನವೇ ಹಾಗೆ, ಪ್ರತಿಯೊಂದು ಪ್ರೂಫಿನಲ್ಲಿಯೂ ಏನಾದರೊಂದು ಸೇರಿಸಿಬಿಡುವುದು.



ಸರಿ, ಅವರು ಸೇರಿಸಿದ್ದು ಏನು ಎನ್ನುವುದು ನನಗೆ ಅರ್ಥವಾಗಲಿಲ್ಲ. ಎಷ್ಟು ಯೋಚಿಸಿದರೂ ತಿಳಿಯಲೊಲ್ಲದು. ಅವರನ್ನು ಕೇಳದೆಯೇ ಅವರು ತಿದ್ದಿರುವುದನ್ನು ನಾನು ಕಂಡು ಹಿಡಿಯಬೇಕು ಎನ್ನುವುದು ನನ್ನ ಹಟ. ತರಾಸು ಅವರ ಕಾಕ ಲಿಪಿಯನ್ನೆಲ್ಲ ಅರ್ಥ ಮಾಡಿಕೊಳ್ಳುತ್ತಿದ್ದವನಿಗೆ ಈ ವಿ.ಸೀ. ಬರಹ ಕೈಕೊಡುತ್ತ ಇದೆಯಲ್ಲ. ಏಕೆಂದು ತಿಳಿಯುತ್ತ ಇಲ್ಲವಲ್ಲ–ಛೇ.

ಕೊನೆಗೆ ಇದು ಅರ್ಥವಾಗುವುದಿಲ್ಲ, ನಾನು ಸೋತೆ, ಅವರನ್ನು ಕೇಳಿಯೇ ಬರೋಣ ಎಂದು ಅವರ ಮನೆಗೆ ಹೊರಟೆ.

ಆಟೋದಲ್ಲಿ ಹೋಗುವಾಗಲೂ ನನಗೆ